12	Janapríya Apartment (Bharat Enclave) Sunkadakatte, Magadı Maın Road, Bangalore 91
13	Janaprıya Heıghts, Mallasandra, Dasarahallı Post, Hesaraghatta Maın Road, Bangalore
14	Dıamond Enclave, Chıkkalasandra, Dasarahallı Post, Hesaraghatta Maın Road, Bangalore
15	M/s Bındu Promoters & Developers, "Bındu Anmol" Sy No 420, Sıte No 1, 7th Cross, Amarjyothınagar, Nagarabhavı Maın Road, Vıjayanagar, Bangalore

16 (61) ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ) ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಗದಗ ಜಿಲ್ಲೆ ಕಪ್ಪತ್ ಗುಡ್ಡದಲ್ಲಿ ಗಾಳಿ ವಿದ್ಯುತ್ ಉತ್ಪಾದನೆಗಾಗಿ ಅನುಮತಿ ಕೊಟ್ಟಿರುವ ಸಂಸ್ಥೆಗಳಿಂದ ಸರ್ಕಾರಕ್ಕೆ ತುಂಬಿಸಿಕೊಂಡಿರುವ ರೂ 11 00 ಕೋಟಿಗಳ ಹಣವನ್ನು ಆ ಭಾಗದ ಅರಣ್ಯ ಅಭಿವೃದ್ಧಿಗಾಗಿ ಖರ್ಚು ಮಾಡುವುದಾಗಿ ಹೇಳಿದ್ದರೂ ಸಹ ಸದರಿ ಹಣವನ್ನು ಈವರೆಗೆ ಬಿಡುಗಡೆ ಮಾಡದಿರುವುದಕ್ಕೆ ಕಾರಣಗಳೇನು ,

ಆ) ಸದರಿ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು ?

ಶ್ರೀ ಸಿ ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ ಸಚಿವರು)

ಅ) ಗದಗ ಜಿಲ್ಲೆಯ ಕಪ್ಪತ್ ಗುಡ್ಡದಲ್ಲಿ ಗಾಳಿ ವಿದ್ಯುತ್ ಉತ್ಪಾನೆಗಾಗಿ ಅನುಮತಿ ಕೊಟ್ಟಿರುವ ಸಂಸ್ಥೆಗಳಿಂದ ತುಂಬಿಸಲಾದ ಹಣವನ್ನು ಕಾಂಪ ಎಂಬ ರಾಜ್ಯ ಸರ್ಕಾರದ ಲೆಕ್ಕಶೀರ್ಷಿಕೆಯಿಂದ ಸರ್ವೋಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಕೇಂದ್ರಸರ್ಕಾರದ ಕಾಂಪ ಎಂಬ ನಿಧಿಗೆ ವರ್ಗಾಯಿಸಲಾಗಿದೆ ಈ ಹಣವನ್ನು ಅಭಿವೃದ್ಧಿ ಕಾಮಗಾರಿಗಳಿಗೆ ಉಪಯೋಗಿಸಲು ಸೂಕ್ತ ಕ್ರಿಯಾ ಯೋಜನೆಯನ್ನು ತಯಾರಿಸಿ, ಕೇಂದ್ರ ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯಬೇಕಾಗಿರುತ್ತದೆ ಆದ್ದರಿಂದ ಹಣವನ್ನು ಬಿಡುಗಡೆ ಮಾಡಿರುವುದಿಲ್ಲ

ಆ) ಅಭಿವೃದ್ಧಿ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ರಾಜ್ಯಸರ್ಕಾರದ ಮೂಲಕ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿ, ಕೇಂದ್ರ ಸರ್ಕಾರವು ಸದರಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿ, ಹಣ ಬಿಡುಗಡೆ ಮಾಡಿದ ನಂತರ ಗದಗ ವಿಭಾಗಕ್ಕೆ ಹಣವನ್ನು ಬಿಡುಗಡೆ ಮಾಡಲಾಗುವುದು

17 (62) ಶ್ರೀ ಪಾಟೀಲ್ ಎಸ್ ಎಸ್ (ಮುಂಡಗರಿ) ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಅರಣ್ಯ ಇಲಾಖೆಗೆ ಹಿಂದಿನ 3 ವರ್ಷಗಳ ಆಯವ್ಯಯದಲ್ಲಿ ಒದಿಗಸಿದ ಹಣವೆಷ್ಟು ಹಾಗೂ ಇದರಲ್ಲಿ ಖರ್ಚಾದ ಹಣವೆಷ್ಟು , (ವಿವರ ನೀಡುವುದು) ,

ಆ) ರಾಜ್ಯದಲ್ಲಿ ಅರಣ್ಯೀಕರಣಕ್ಕಾಗಿ ಖರ್ಚು ಮಾಡಿದ ಹಣ ಎಷ್ಟು ಹಾಗೂ ಎಷ್ಟು ಲಕ್ಷ ಸಸಿಗಳನ್ನು ಇದುವರೆವಿಗೂ ನೆಡಲಾಗಿದೆ ಹಾಗೂ ಅವುಗಳಲ್ಲಿ ಎಷ್ಟು ಪ್ರಮಾಣದ ಸಸಿಗಳು ಉಳಿದಿವೆ (3 ವರ್ಷಗಳ ವಿವರ ನೀಡುವುದು) ?

ಶ್ರೀ ಸಿ ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಹಿಂದಿನ ಮೂರು ವರ್ಷಗಳ ಆಯವ್ಯಯ ಅಂದಾಜಿನಲ್ಲಿ ಒದಗಿಸಿದ ಹಣ ಹಾಗೂ ಖರ್ಚಾದ ಹಣದ ವಿವರ ಈ ಕೆಳಕಂಡಂತಿದೆ

ಕ್ರ ಸಂ	ವರ್ಷ	ಆಯವ್ಯಯ ಅಂದಾಜಿನಲ್ಲಿ ಒದಗಿಸಿದ ಒಟ್ಟಾರೆ ಹಣ (ರೂ ಕೋಟಿಗಳಲ್ಲಿ)	ಖರ್ಚಾದ ಹಣದ ಮೊತ್ತ (ರೂ ಕೋಟಿಗಳಲ್ಲಿ)
1	2003–04	247 07	332 39
2	2004–05	257 53	287 99
3	2005–06	259 77	253 34

2003–04 ಮತ್ತು 2004–05ನೇ ಸಾಲಿನ ಆಯವ್ಯಯದಲ್ಲಿ ಅವಕಾಶ ಕಲ್ಪಿಸಿರುವ ಮೊತ್ತಕ್ಕಿಂತ ಹೆಚ್ಚಿಗೆ ವೆಚ್ಚವಾಗಿದ್ದು, ಇದು ವಾಸ್ತವಿಕವಾಗಿ ಹೆಚ್ಚುವರಿಯಾಗಿ ವೆಚ್ಚ ಮಾಡಿದ ಹಣವಲ್ಲ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಬರುವ ಮೊತ್ತ ಮತ್ತು ಅರಣ್ಯಾಭಿವೃದ್ಧಿ ತೆರಿಗೆ ರೂಪದಲ್ಲಿ ವಸೂಲಾಗುವ ಮೊತ್ತವನ್ನು ವರ್ಗಾವಣೆ ಮೂಲಕ ಅರಣ್ಯಾಭಿವೃದ್ಧಿ ನಿಧಿ ಲೆಕ್ಕಕ್ಕೆ ಜಮಾ ತೆಗೆದುಕೊಳ್ಳಲಾಗುತ್ತಿದ್ದು, ಈ ಎರಡು ವರ್ಷಗಳಲ್ಲಿ ನಿಗಧಿತ